# ಒಂದು ವಿಶಿಷ್ಟ ಅನುಭವ

ಸ್ವಾಮಿ ವಿವೇಕಾನಂದರಲ್ಲಿದ್ದ ಅಗಾಧ ಮಾನವಪ್ರೇಮ ಅನೇಕರಲ್ಲಿ ಕ್ರಿಯಾತ್ಮಕವಾಗಿ ಅಭಿವ್ಯಕ್ತವಾಗುತ್ತಿದೆ. ಇಂತಹ ವಿಶಿಷ್ಟ ವ್ಯಕ್ತಿಯೊಬ್ಬರ ಸ್ವಾರಸ್ಯಕರ ಜೀವನಾನುಭವವನ್ನು ಈ ಲೇಖನದಲ್ಲಿ ಚಿತ್ರಿಸಲಾಗಿದೆ. ಸ್ವಾಮಿ ಆತ್ಮಶ್ರದ್ಧಾನಂದರು ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವರು.

ಸ್ವಾಮಿ ಆತ್ಮಶ್ರದ್ಧಾನಂದ

ಅದೊಂದು ಅನಿರೀಕ್ಷಿತ ಘಟನೆ. ನಾನು ವಿದ್ಯಾರ್ಥಿಗಳ ಜೊತೆ ಶಿಕ್ಷಣ-ಪ್ರವಾಸಕ್ಕೆ ಹೊರಟಿದ್ದೆ. ಎಲ್ಲ ಪ್ರವಾಸಗಳಂತೆಯೆ ಇದೂ ಇರುತ್ತದೆ ಎಂಬುದು ನನ್ನ ನಿರೀಕ್ಷೆಯಾಗಿತ್ತು. ದೀರ್ಘ ಬಸ್ ಪ್ರಯಾಣ, ಮಧ್ಯೆ ಮಧ್ಯೆ ತಿಂಡಿ ತಿನ್ನುವುದು, ಹರಟೆ, ಹಾಸ್ಯ, ಪ್ರಕೃತಿ ಸೌಂದರ್ಯವನ್ನು ಸವಿಯುವುದು, ಸಾಂಸ್ಕೃತಿಕ ಚಾರಿತ್ರಿಕ ಶೈಕ್ಷಣಿಕ ಮಹತ್ತ್ವದ ಸ್ಥಳಗಳ ಸಂದರ್ಶನ—ಇವು ಪ್ರವಾಸದ ಸರ್ವೇ ಸಾಮಾನ್ಯವಾದ ಲಕ್ಷಣಗಳು. ನಾವು ಹೆಗ್ಗಡದೇವನಕೋಟೆಗೆ ಹೊರಟಿದ್ದೆವು. ಅಲ್ಲಿ ಗಿರಿಜನರ ಸೇವಾಕಾರ್ಯವನ್ನು ವೀಕ್ಷಿಸುವುದಿತ್ತು. ಅದರ ಜೊತೆಗೆ ಹತ್ತಿರದಲ್ಲಿರುವ ಅಣೆಕಟ್ಟುಗಳು, ಅರಣ್ಯಗಳು ಇತ್ಯಾದಿಗಳನ್ನೂ ನೋಡುವುದಿತ್ತು. ಅಷ್ಟೇನೂ ಸ್ವಾರಸ್ಯಕರವಾದ ಯೋಜನೆಯಾಗಿರಲಿಲ್ಲ. ನಿರುತ್ಸಾಹದಿಂದಲೇ ನಾನು ಪ್ರಯಾಣ ಹೊರಟೆ.

ಬೆಳಗ್ಗೆ ೭.೪೫ಕ್ಕೆ ನಾವು ಮೈಸೂರು ಬಿಟ್ಟೆವು. ಹವಾಹದವಾಗಿತ್ತು—ಸ್ವಲ್ಪ ತಣ್ಣಗೆ ಹಿತಕರವಾಗಿತ್ತು. ಬಸ್ ನಗರದ ಮುಖ್ಯ ರಸ್ತೆಗಳ ಮೂಲಕ ಹಾದುಹೋಗಿ ಗ್ರಾಮಪ್ರದೇಶವನ್ನು ತಲುಪಿತು. ನಾವು ಸುಮಾರು ೬೦ ಕಿಲೋಮೀಟರ್ ಹೋಗಬೇಕಾಗಿತ್ತು. ನಮ್ಮ ವಾಹನ ವಿಸ್ತಾರವಾದ, ಹೊಚ್ಚ ಹಸಿರಿನಿಂದ ಶೋಭಿಸುವ ಬತ್ತದ ಹೊಲದ ಮೂಲಕ ಹಾದುಹೋಗುತ್ತಿತ್ತು—ಮಧ್ಯೆ ಮಧ್ಯೆ ಮಣ್ಣಿನ ಗುಡಿಸಿಲುಗಳು, ಸರಳ ಹಳ್ಳಿಗಾಡಿನ ಜನರ ಓಡಾಟ, ಅವರ ನಡುವೆಯೇ ಹಸು, ನಾಯಿ, ಹಂದಿ ಮುಂತಾದ ಪ್ರಾಣಿಗಳ ಅಲೆದಾಟ. ಅದೊಂದು ವಿಶಿಷ್ಟ ಪ್ರಪಂಚ—ಮೈಮುರಿದು ದುಡಿಯುವ ಜನರು, ಆದರೆ ಅಷ್ಟೊಂದು ಆರೋಗ್ಯವಂತರಾಗಿ ಕಾಣುತ್ತಿರಲಿಲ್ಲ. ಜೀವನದ ಹೊರೆ ಅವರನ್ನು ಬಾಧಿಸುತ್ತಿರುವಂತಿತ್ತು. ಆದರೂ ಒಂದು ರೀತಿಯ ನೆಮ್ಮದಿಯ ಭಾವವನ್ನು ಅವರ ಮುಖದಲ್ಲಿ ಕಾಣಬಹುದಿತ್ತು. ಇದೊಂದು ಭಾರತದ ಹಳ್ಳಿಗಳ ಸಾಮಾನ್ಯ ದೃಶ್ಯ.

ಮೊದಲು ನಾವು ಅಣೆಕಟ್ಟನ್ನು ಸಂದರ್ಶಿಸಿದೆವು. ಅನಂತರ **ಶಂಕರ ಸಮುದಾಯ ಆರೋಗ್ಯ ಕೇಂದ್ರವನ್ನು** ತಲುಪಿದೆವು. ಆಧುನಿಕ ನಗರದಿಂದ ಹೋದವರಿಗೆ ಅದನ್ನು ಆಸ್ಪತ್ರೆ ಎಂದು ಕರೆಯುವುದಕ್ಕೆ ಕಷ್ಟವಾಗುತ್ತಿತ್ತು. ಅದೊಂದು ಬಹುಮಹಡಿಯ ಕಟ್ಟಡವಾಗಿರಲಿಲ್ಲ—ಅದಕ್ಕೆ ಮಹಡಿಯೇ ಇರಲಿಲ್ಲ. ಸಾಲಾಗಿ ಕೆಲವು ಕೊಠಡಿಗಳಿದ್ದವು, ಎರಡೂ ಕಡೆ ವರಾಂಡವಿತ್ತು. ಇದೆಂಥ ಆಸ್ಪತ್ರೆ!—ಎಂದು ಮನಸ್ಸಿನಲ್ಲೇ ನಕ್ಕೆ. ಇದನ್ನು ನೋಡಲು ಇಷ್ಟು ದೂರ ಬರಬೇಕಾಗಿತ್ತೆ ಎಂದೆನಿಸಿತು.

ನಾವು ಕಟ್ಟಡದ ಹೊರ ಆವರಣವನ್ನು ಪ್ರವೇಶಿಸುತ್ತಿದ್ದಂತೆಯೇ ವ್ಯಕ್ತಿಯೊಬ್ಬರು ಬಂದು ನಮ್ಮನ್ನು ಸ್ವಾಗತಿಸಿದರು—ಸರಳ ಉಡುಪು, ಸಣ್ಣ ಗಡ್ಡ, ಯುವವಯಸ್ಸು, ಸಾಮಾನ್ಯ ಮೈಕಟ್ಟು. 'ಇವರೇ ಡಾ. ಬಾಲಸುಬ್ರಹ್ಮಣ್ಯಂ' ಎಂದು ಅವರ ಪರಿಚಯವನ್ನು ನಮಗೆ ಮಾಡಿಕೊಡಲಾಯಿತು. ಅವರು ನಮ್ಮನ್ನು ಆದರದಿಂದ ಸ್ವಾಗತಿಸಿ, ಆಸ್ಪತ್ರೆಯನ್ನು ತೋರಿಸಲು ಕರೆದುಕೊಂಡು ಹೋದರು. ಎಲ್ಲವನ್ನೂ ಸೂಕ್ಷ್ಮವಾಗಿ ಪರಿಶೀಲಿಸಬೇಕೆಂದೂ ಪ್ರಶ್ನೆಗಳಿದ್ದರೆ ಅನಂತರ ಕೇಳಬೇಕೆಂದೂ ನಮಗೆ ಸೂಚಿಸಿದರು. ಅವರು ನಮ್ಮನ್ನು ಮೂರು ಗುಂಪುಗಳಾಗಿ ವಿಭಾಗಿಸಿದರು. ಒಂದು ಗುಂಪನ್ನು ತಾವೇ ತೋರಿಸಲು ಕರೆದುಕೊಂಡು ಹೋದರು, ಉಳಿದೆರಡನ್ನು ಅವರ ಸಹಕಾರ್ಯಕರ್ತರಿಗೆ ವಹಿಸಿದರು.

ನಮ್ಮ ಪಾಲಿಗೆ ಒಂದು ಹೊಸ ಅನುಭವವೇ ಕಾದಿತ್ತು. ಅದು ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಯಂತಿರಲಿಲ್ಲ. ಅದು ಕೆಲವು ಯುವಕರು ಸ್ವಯಂಪ್ರೇರಣೆಯಿಂದ ನಡೆಸುತ್ತಿದ್ದ ಆಸ್ಪತ್ರೆ. '**ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್**' ಎಂದು ಅವರ ಸಂಸ್ಥೆಯ ಹೆಸರು. ಅದರ ಸ್ಥಾಪಕ-ಅಧ್ಯಕ್ಷ ಡಾ.ಬಾಲಸುಬ್ರಹ್ಮಣ್ಯಂ. ಆ ಚಿಕ್ಕ ಆಸ್ಪತ್ರೆ ಅತ್ಯಂತ ಸುಸಜ್ಜಿತವಾಗಿತ್ತು. ಎಲ್ಲರೂ ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿದ್ದರು. ಆ ಕಟ್ಟಡವನ್ನು ನೋಡಿದರೆ ಅಲ್ಲಿ ಅಷ್ಟೊಂದು ಅನುಕೂಲತೆಗಳಿವೆಯೆಂದು ಊಹಿಸುವುದಕ್ಕೂ ಆಗುವಂತಿರಲಿಲ್ಲ. ಪ್ರತಿ ವರ್ಷ ೨೦,೦೦೦ದಿಂದ ೨೨,೦೦೦ ರೋಗಿಗಳು ಅಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆಂದು ಅವರು ತಿಳಿಸಿದರು. ಔಷಧಿ, ಚಿಕಿತ್ಸೆ ಎಲ್ಲ ಉಚಿತ! ಆ ಆಸ್ಪತ್ರೆ ಇರುವುದು ಗಿರಿಜನರಿಗಾಗಿ. ಅವರು ಚಿಕಿತ್ಸೆಗಾಗಿ ನಗರಗಳಿಗೆ ಹೋಗುವ ಸ್ಥಿತಿಯಲ್ಲಿರಲಿಲ್ಲ. ಹತ್ತಿರದಲ್ಲೆಲ್ಲೂ ಯಾವ ಆಸ್ಪತ್ರೆಯಾಗಲಿ, ಕ್ಲಿನಿಕ್ ಆಗಲಿ ಇರಲಿಲ್ಲ.

'ನಾವು ಈ ಆಸ್ಪತ್ರೆಯನ್ನು ಬೇರೆ ಬೇರೆ ದಾನಿಗಳ ಸಹಾಯದಿಂದ ನಡೆಸುತ್ತಿದ್ದೇವೆ' ಎಂದು ತುಂಬ ವಿನಯದಿಂದ ಹೇಳಿದರು ಡಾ. ಬಾಲಸುಬ್ರಹ್ಮಣ್ಯಂ. ಅವರ ಹತ್ತಿರ ನಾಲ್ಕು ಸುಸಜ್ಜಿತ ಅತ್ಯಾಧುನಿಕ ಆಂಬುಲೆನ್ಸ್‌ಗಳಿದ್ದವು. ಅರಣ್ಯದ ಒಳಪ್ರದೇಶದಲ್ಲಿ ಹೋಗಿ ರೋಗಿಗಳ ಚಿಕಿತ್ಸೆ ಮಾಡಲು ಸಂಚಾರಿ ಡಿಸ್ಪೆನ್ಸರಿಗಳಿದ್ದವು. ಇಷ್ಟೆಲ್ಲ ವ್ಯವಸ್ಥೆಗಳೂ ಎಂತಹ ಸ್ಥಳದಲ್ಲಿ? ದಟ್ಟಡವಿಯ ಮಧ್ಯೆ!.

ಸುತ್ತಲೂ ವಿದ್ಯುತ್ ಬೇಲಿ ಇರುವುದನ್ನು ನೋಡಿ ಪ್ರಶ್ನಿಸಿದಾಗ

ಅವರೆಂದರು: 'ಇಲ್ಲಿ ಆನೆ, ಹುಲಿ, ಕರಡಿ, ಹಂದಿ ಮುಂತಾದ ವನ್ಯ ಮೃಗಗಳಿವೆ. ಅವುಗಳಿಂದ ರಕ್ಷಣೆ ಪಡೆಯಲು ಈ ಬೇಲಿ' ಎಂದರು ಮುಗುಳ್ನಗುತ್ತ. ಈಗ ಎಲ್ಲರ ಆಸಕ್ತಿಯೂ ಕೆರಳಿತು.

ಮುಂದೆ ನಾವು ನೋಡಬೇಕಾದದ್ದು ಅವರು ನಡೆಸುತ್ತಿದ್ದ ಶಾಲೆಯನ್ನು. ಅದು ಸ್ವಲ್ಪ ದೂರದಲ್ಲಿತ್ತು. ಹಳ್ಳ ದಿಣ್ಣೆಗಳನ್ನು ಹತ್ತಿ ಇಳಿಯುತ್ತ ವಾಹನ ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಯಿತು. ಔಪಚಾರಿಕವಾಗಿ ಅದನ್ನು ನಾವು ರಸ್ತೆ ಎಂದು ಕರೆಯಬೇಕಾಗಿತ್ತು. ೩೦ ವರ್ಷಗಳ ಹಿಂದೆ ಯಾವಾಗಲೊ ಅದರ ರಿಪೇರಿ ಆಗಿತ್ತಂತೆ. ಈಗ ರಿಪೇರಿ ಮಾಡುವುದಕ್ಕೆ ಏನೂ ಉಳಿದಿಲ್ಲವೆಂದು ಹಾಗೆಯೇ ಬಿಟ್ಟಿದ್ದಿರಬೇಕು. ಅಂತೂ ನಮ್ಮ ಎಲುಬುಗಳು ತುಂಡಾಗದೆ, ಡಿಸ್‌ಲೊಕೇಟ್ ಆಗದೆ ಇದ್ದುದಕ್ಕಾಗಿ ದೇವರಿಗೆ ಧನ್ಯವಾದವನ್ನು ಅರ್ಪಿಸಿದೆವು.

ಶಾಲೆಯ ಕಟ್ಟಡ ಸಾಮಾನ್ಯವಾಗಿತ್ತು. ಆದರೆ ಅದರಲ್ಲಿ ನಡೆಯುತ್ತಿದ್ದ ಕಾರ್ಯ ಅಸಾಮಾನ್ಯ. ಆ ಶಾಲೆ ಕೇವಲ ಗಿರಿಜನ ಮಕ್ಕಳಿಗಾಗಿ ಮಾತ್ರ. ಅವರ ಹಿರಿಯರು ವಿದ್ಯಾಭ್ಯಾಸದ ಕನಸನ್ನೂ ಕಂಡಿರಲಿಕ್ಕಿಲ್ಲ. ಆ ಶಾಲೆಯಲ್ಲಿ ಎಲ್ಲ ಅನುಕೂಲತೆಗಳಿದ್ದವು. ಒಳ್ಳೆಯ ಪೀಠೋಪಕರಣಗಳುಳ್ಳ ತರಗತಿಗಳು, ಚೊಕ್ಕಟವಾದ ಮಲಗುವ ಮನೆ ಮತ್ತು ಪ್ರಾರ್ಥನಾ ಭವನ, ಊಟದ ಮನೆ ಇತ್ಯಾದಿಗಳು. ಕಂಪ್ಯೂಟರ್ ಸೌಲಭ್ಯವೂ ಇತ್ತು. ಅನೇಕ ಮಕ್ಕಳು ಕುತೂಹಲದಿಂದ ಮುಗುಳ್ನಗುತ್ತ ನಮ್ಮನ್ನು ನೋಡುತ್ತಿದ್ದರು. ಆ ಮುಗ್ಧ ಮುಖಗಳಲ್ಲಿ ಎಷ್ಟೊ ಆಶೋತ್ತರಗಳು ಹೊರಹೊಮ್ಮುತ್ತಿರುವುದನ್ನು ಗಮನಿಸಬಹುದಾಗಿತ್ತು. ಅವರ ಆಶೋತ್ತರಗಳ ಸಾಫಲ್ಯಕ್ಕೆ ಮಾರ್ಗವನ್ನು ಕಲ್ಪಿಸಿಕೊಡುತ್ತಿರುವ ಆ ಯುವಕರ ತಂಡ ಎಂಥ ಧನ್ಯ!

ಗಿರಿಜನರ ಏಳ್ಗೆಗಾಗಿ ಕೈಗೊಂಡಿರುವ, ಕೈಗೊಳ್ಳಲಿರುವ ಕಾರ್ಯಕ್ರಮಗಳನ್ನೆಲ್ಲ ವಿವರಿಸಿದ ಮೇಲೆ ಡಾ.ಬಾಲು (ಬಾಲಸುಬ್ರಹ್ಮಣ್ಯರನ್ನು ಇದೇ ರೀತಿ ಕರೆಯುವುದು ರೂಢಿ) ಈ ಸೇವಾ ಕಾರ್ಯಗಳ ಹಿಂದಿರುವ ಕಥೆಯನ್ನು ವಿವರಿಸತೊಡಗಿದರು. ಆ ಕಥೆ ತುಂಬ ಸ್ವಾರಸ್ಯಕರವಾಗಿದೆ. ಅದು ನಡೆದ ಕಥೆ, ಕಟ್ಟು ಕಥೆಯಲ್ಲ. ಅಂಥ ಕಥೆಗಳು ಎಷ್ಟೋ ಜನರ ಜೀವನದಲ್ಲಿ ನಡೆಯುತ್ತವೆ. ಆದರೆ ಕೆಲವರಲ್ಲಿ ಮಾತ್ರ ಮಹತ್ಸಾಧನೆಗೆ ನಾಂದಿಯಾಗುತ್ತವೆ.

ಬಾಲು ಅವರು ಮಧ್ಯಮ ವರ್ಗದ ಕುಟುಂಬಕ್ಕೆ ಸೇರಿದವರು. ಪಿ.ಯು.ಸಿ ಆದಮೇಲೆ ಮೆಡಿಕಲ್ ಓದಿ ವೈದ್ಯರಾಗಬೇಕೆಂಬುದು ಅವರ ಇಚ್ಛೆಯಾಗಿತ್ತು. ಆದರೆ ೯೨% ಅಂಕ ಗಳಿಸಿದ್ದರೂ ಮೆಡಿಕಲ್‌ನಲ್ಲಿ ಸೀಟ್ ಸಿಗಲಿಲ್ಲ. ಆಗ ಇಚ್ಛೆ ಇಲ್ಲದಿದ್ದರೂ ಬೆಂಗಳೂರಿನಲ್ಲಿ ಇಂಜಿನೀಯರಿಂಗ್ ಕಾಲೇಜ್ ಸೇರಿದರು. ಸೇರಿದ ಮೊದಲನೆಯ ದಿನವೇ ರ್‍ಯಾಗಿಂಗ್ ಪ್ರಾರಂಭವಾಯಿತು. ಅದು ಸಾಮಾನ್ಯ ರ್‍ಯಾಗಿಂಗ್ ಅಲ್ಲ—ಭಯಂಕರವಾದುದು. ಅದನ್ನು ರ್‍ಯಾಗಿಂಗ್ ಅನ್ನುವುದಕ್ಕಿಂತ ಟೆರರಿಸಂ ಎಂದೇ ಕರೆಯಬಹುದಾಗಿತ್ತು. ಒಂದೇ ದಿನದ ಆ ಅನುಭವ ಅವರನ್ನು ಸಂಪೂರ್ಣ ಹತಾಶರನ್ನಾಗಿ ಮಾಡಿ ಮುಂದೆ ಆ ಕಾಲೇಜ್ ಮೆಟ್ಟಲು ಹತ್ತುವುದಿಲ್ಲವೆಂದು ತೀರ್ಮಾನಿಸುವಂತೆ ಮಾಡಿತು.



ಶಂಕರ ಸಮುದಾಯ ಆರೋಗ್ಯ ಕೇಂದ್ರ, ಕೆಂಚೇನಹಳ್ಳಿ

ಆದರೆ ಮುಂದೇನು? ಆ ಕಾಲೇಜಿನ ಸಮೀಪದಲ್ಲಿಯೇ ಶ್ರೀರಾಮಕೃಷ್ಣ ಆಶ್ರಮವಿತ್ತು. ಅಲ್ಲಿ ಹೇಗಾದರೂ ಕಾಲ ಕಳೆಯೋಣವೆಂದು ಬಾಲು ಅಲ್ಲಿಗೆ ಹೋಗತೊಡಗಿದರು. ಅಲ್ಲಿಯ ವಾತಾವರಣ ಅವರ ಮನಸೆಳೆಯಿತು. ಅಲ್ಲಿನ ಹಚ್ಚ ಹಸಿರು, ಪ್ರಶಾಂತತೆ ಅವರ ಬೆಂದ ಹೃದಯವನ್ನು ತಣಿಸಿತು. ಅವರು ಲೈಬ್ರರಿಗೆ ಹೋಗಿ ಸ್ವಾಮಿ ವಿವೇಕಾನಂದರ ಪುಸ್ತಕಗಳನ್ನು ಓದತೊಡಗಿದರು—ಒಂದಾದ ಮೇಲೆ ಒಂದು ಓದಿ ಮುಗಿಸಿದರು. ಅವರು ಓದುತ್ತ ರೋಮಾಂಚನಗೊಂಡರು. **ವಿವೇಕಾನಂದರ ಜೀವನ ಸಂದೇಶಗಳು ಅವರ ಅಂತರ್ಯವನ್ನು ಪ್ರವೇಶಿಸಿದವು, ಅಲ್ಲಿ ತಮ್ಮ ಪರಿವರ್ತನೆಯ ಕಾರ್ಯ ಪ್ರಾರಂಭಿಸಿದವು. ಬಾಲು ಈಗ ಬೇರೆಯೇ ವ್ಯಕ್ತಿಯಾಗಿದ್ದರು. ಸ್ವಾಮೀಜಿಯವರಲ್ಲಿದ್ದ ಆ ವಿಶ್ವಾನುಕಂಪೆ, ಬಡವರ ಬಗ್ಗೆ ಕಳಕಳಿ ಬಾಲು ಅವರ ವ್ಯಕ್ತಿತ್ವವನ್ನೂ ಆವರಿಸಿದವು. ಬಡವರಿಗಾಗಿ ಏನಾದರೂ ಮಾಡಬೇಕೆಂಬ ಆಕಾಂಕ್ಷೆಯ ಭೂತ ಅವರನ್ನು ಮೆಟ್ಟಿಕೊಂಡಿತು.**

ಇದ್ದಕ್ಕಿದ್ದಂತೆಯೇ ಅನಿರೀಕ್ಷಿತವಾಗಿ ಅವರಿಗೊಂದು ಟೆಲಿಗ್ರಾಂ ಬಂತು: 'ಕೂಡಲೇ MMCಗೆ (ಮೈಸೂರು ಮೆಡಿಕಲ್ ಕಾಲೇಜ್) ಬಂದು ಜಾಯಿನ್ ಆಗಿ.' ಅವರಿಗೆ ಅತ್ಯಾಶ್ಚರ್ಯ, ಆದರೆ ಅಷ್ಟೇ ಸಂತೋಷ. ಅದೇ ದಿನವೇ ಬಸ್ಸಿನಲ್ಲಿ ಮೈಸೂರಿಗೆ ಬಂದು ಕಾಲೇಜ್ ಸೇರಿದರು.

ಕಾಲೇಜಿನಲ್ಲಿ ಓದುತ್ತಿರುವಾಗಲೇ ಸೇವಾಕಾರ್ಯದ ಯೋಜನೆ ಅವರ ಮನಸ್ಸಿನಲ್ಲಿ ಒಂದು ಮೂರ್ತರೂಪವನ್ನು ಪಡೆಯತೊಡಗಿತು. ಸಮಾನ ಮನೋಭಾವದ ಕೆಲವು ಸ್ನೇಹಿತರನ್ನು ಬಾಲು ಒಂದುಗೂಡಿಸಿದರು. ಮೈಸೂರಿನ ಹೊರವಲಯದಲ್ಲಿ ಎರಡು ಭಾನುವಾರದ ಚಿಕಿತ್ಸಾಲಯಗಳನ್ನು ಪ್ರಾರಂಭಿಸಲಾಯಿತು. ಅವು ಕ್ರಮೇಣ ಜನಪ್ರಿಯವಾಗತೊಡಗಿದವು. ಅವರ ಇತರ ಸಹಪಾಠಿಗಳು ಅವರನ್ನು ಲೇವಡಿ ಮಾಡುತ್ತಿದ್ದರು, ಹುಚ್ಚು ಸಾಹಸವೆಂದು ನಿಂದಿಸುತ್ತಿದ್ದರು. ಆದರೆ ಇವಾವುವೂ ಅವರನ್ನು ವಿಚಲಿತಗೊಳಿಸಲಿಲ್ಲ—ಕೆಲಸ ಮುಂದುವರಿಯಿತು. ಅವರು ಮೈಸೂರಿನ ರಾಮಕೃಷ್ಣಾಶ್ರಮಕ್ಕೆ ಭೇಟಿ ನೀಡುತ್ತ ನಿರಂತರ ಸ್ಫೂರ್ತಿಯನ್ನು ಪಡೆಯುತ್ತಿದ್ದರು.

ಒಂದು ದಿನ ಮೈಸೂರಿನ ಜಿಲ್ಲಾಧಿಕಾರಿಗಳು (*Deputy Commissioner*)ಬಾಲು ಅವರನ್ನು ಸಂಧಿಸಿದರು. ಅವರಿಬ್ಬರೂ

ಒಳ್ಳೆಯ ಸ್ನೇಹಿತರು. ಬಾಲು ಅವರು ನಡೆಸುತ್ತಿದ್ದ ಸಂಡೇ ಕ್ಲಿನಿಕ್ ಬಗ್ಗೆ ಅವರು ಕೇಳಿದ್ದರು. ಅವರು ಹೇಳಿದರು: 'ನಗರಕ್ಕಿಂತ ಹಳ್ಳಿಯಲ್ಲಿ ನಿಮ್ಮ ಆವಶ್ಯಕತೆ ಜಾಸ್ತಿಯಿದೆ.' 'ನಾನೇನು ಮಾಡ ಬೇಕು?' ಬಾಲು ಕೇಳಿದರು. ಅನಂತರ ಅವರು ಬಾಲು ಅವರನ್ನು ಮೈಸೂರಿನಿಂದ ೮೦ ಕಿಲೋಮೀಟರ್ ದೂರವಿರುವ H.D.ಕೋಟೆ ತಾಲ್ಲೂಕಿಗೆ ಕರೆದುಕೊಂಡು ಹೋದರು. ನಾಗರಹೊಳೆ ಮತ್ತು ಬಂಡೀಪುರ ಅಭಯಾರಣ್ಯದ ನಡುವೆ ಆ ಪ್ರದೇಶವಿದೆ. ಆಗ ಏಪ್ರಿಲ್ ತಿಂಗಳಾಗಿದ್ದು ಸುತ್ತ ಹಸಿರು ಸಂತರ್ಪಣೆ. ಬಾಲು ಅವರಿಗೆ ಆ ಪ್ರದೇಶ ತುಂಬ ಮೆಚ್ಚುಗೆಯಾಯಿತು.

ಸ್ನೇಹಿತರು ಅಲ್ಲಿದ್ದ ಗುಡಿಸಲುಗಳನ್ನು ತೋರಿಸಿದರು. ಆ ಜನರ ಸ್ಥಿತಿ ಅತ್ಯಂತ ಶೋಚನೀಯವಾಗಿತ್ತು. ಅವರಿಗೆ ಯಾವ ವೈದ್ಯಕೀಯ ಸೌಲಭ್ಯವೂ ಇರಲಿಲ್ಲ. ಬಾಲು ತುಂಬ ವಿಚಲಿತ ರಾದರು. ವೈದ್ಯಕೀಯ ವಿದ್ಯಾಭ್ಯಾಸ ಮುಗಿಸಿದ ಮೇಲೆ ಇಲ್ಲಿಯೇ ಬಂದಿರಬೇಕೆಂದು ನಿರ್ಧರಿಸಿದರು. ಅದರಂತೆಯೇ ಅವರು ಮತ್ತು ಇನ್ನೊಬ್ಬರು ಸ್ನೇಹಿತರು ಸೇರಿ ಬ್ರಹ್ಮಗಿರಿಯಲ್ಲಿ ಒಂದು ಸಣ್ಣ ಚಿಕಿತ್ಸಾಲಯವನ್ನು ಪ್ರಾರಂಭಿಸಿದರು. ಅವರ ಸಾಹಸ ಪ್ರಾರಂಭ ವಾಗಿತ್ತು, ಆದರೆ ಅದು ಹೇಗೆ ಮುಂದುವರಿಯುವುದೆಂಬುದು ಅವರಿಗೆ ನಿಶ್ಚಿತವಿರಲಿಲ್ಲ.

ಒಂದು ಸಣ್ಣ ಕೋಣೆ. ಅದೇ ಬಾಲು ಮತ್ತು ಅವರ ಸ್ನೇಹಿತರ ಮನೆ, ಅದೇ ಚಿಕಿತ್ಸಾಲಯ ಕೂಡ. ಅವರಿಬ್ಬರಿಗೂ ಅಡುಗೆ ಬರುತ್ತಿರಲಿಲ್ಲ. 'ಮಾಡಿದ್ದುಣ್ಣೋ ಮಹರಾಯ' ಎಂಬಂತೆ ಅದು ಹೇಗೇ ಇದ್ದರೂ ಧೈರ್ಯವಾಗಿ ತಿನ್ನಬೇಕಾಗಿತ್ತು. ಜನರು ಸಂದೇಹ ದೃಷ್ಟಿಯಿಂದ ಅವರನ್ನು ನೋಡಿದರು. 'ನಗರದಲ್ಲಿ ಒಳ್ಳೆಯ ವೈದ್ಯಕೀಯ ವೃತ್ತಿಯನ್ನು ಬಿಟ್ಟು ಇಲ್ಲಿಗೆ ಯಾರಾದರೂ ಬರು ತ್ತಾರೆಯೆ?'—ಇದು ಎಲ್ಲರ ಮನಸ್ಸಿನಲ್ಲಿ ಏಳುತ್ತಿದ್ದ ಸಾಮಾನ್ಯ ಪ್ರಶ್ನೆ. ಉನ್ನತ ಆದರ್ಶದ ಬಗ್ಗೆ ಚಿಂತಿಸುವವರಾರು? ಅಂತಹ ಸ್ಫೂರ್ತಿಯ ಹಿನ್ನಲೆಯನ್ನು ಭಾವಿಸುವವರಾರು?

ಅನೇಕ ಕಷ್ಟತೊಂದರೆಗಳನ್ನು ಅವರು ಎದುರಿಸಬೇಕಾಯಿತು. ಗಿರಿಜನರಲ್ಲದವರು ಅವರ ಕಾರ್ಯದ ಹಿಂದೆ ಏನೊ ರಾಜಕೀಯ ಉದ್ದೇಶವಿರಬೇಕೆಂದು ಸಂದೇಹಿಸಿದರು. ಗಿರಿಜನರಿಗೂ ಕೂಡ ಇದೊಂದು ಹೊಸ ಅನುಭವ, ಅವರೂ ಅಷ್ಟಾಗಿ ಸಹಕರಿಸು ತ್ತಿರಲಿಲ್ಲ. ತುಂಬ ವಿರೋಧಗಳನ್ನು ಎದುರಿಸಬೇಕಾಯಿತು. ಕೊಲೆಯ ಬೆದರಿಕೆಯನ್ನೂ ಹಾಕಲಾಯಿತು. ಆದರೆ ಸ್ವಾಮಿ ವಿವೇಕಾ ನಂದರ ಆದರ್ಶ ಅವರಿಗೆ ರಕ್ಷಾಕವಚವಾಗಿತ್ತು. ಅವರು ತಮ್ಮ ಕೆಲಸವನ್ನು ಮುಂದುವರಿಸಿದರು. ಕ್ರಮೇಣ ಅವರ ಕಾರ್ಯವ್ಯಾಪ್ತಿ ವಿಸ್ತಾರಗೊಂಡಿತು. ಆಸ್ಪತ್ರೆ ದೊಡ್ಡದೂ ಸುಸಜ್ಜಿತವೂ ಆಯಿತು. ಮಕ್ಕಳಿಗಾಗಿ ಶಾಲೆ, ಹಾಸ್ಟೆಲ್ ತೆರೆಯಲಾಯಿತು. ಜನರಿಂದಲೂ ಸಹಕಾರ ಬಂತು. ಸರ್ಕಾರದಿಂದಲೂ ಧನ ಸಹಾಯ ದೊರಕಿತು. ಪ್ರಶಸ್ತಿಗಳೂ ಬಂದವು. ಭಾರತ ಸರ್ಕಾರ ೧೯೯೩ರಲ್ಲಿ ರಾಷ್ಟ್ರೀಯ ಯುವ ಪ್ರಶಸ್ತಿಯನ್ನು ಬಾಲು ಅವರ ಸಂಸ್ಥೆ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ಗೆ ನೀಡಿತು.

ಈ ಕಥೆಯನ್ನು ಹೇಳಿ ಬಾಲು ತಮ್ಮ ಮಾತನ್ನು ಮುಕ್ತಾಯ ಗೊಳಿಸಿದರು: 'ಈಗ ನಾವು ಇಲ್ಲಿ ೧೦೦ ಜನರಿದ್ದೇವೆ. ಎಲ್ಲ ಗಿರಿಜನರ ಸೇವೆಗಾಗಿಯೇ ಬಂದವರು. ನಾವು ಅಲ್ಪ ವೇತನವನ್ನು ಪಡೆಯುತ್ತೇವೆ, ಆದರೆ ಉನ್ನತ ಮೌಲ್ಯಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸುತ್ತಿದ್ದೇವೆ. ನಮ್ಮ ಈ ತಂಡದಲ್ಲಿ ಜೀವನದಲ್ಲಿ ಒಂದು ಉನ್ನತ ಅರ್ಥವನ್ನು ಕಂಡುಕೊಳ್ಳುವವರಿದ್ದಾರೆ. ಕೇವಲ ಹಣಸಂಪಾದನೆ ಮತ್ತು ವಿಲಾಸ ಜೀವನ ನಮಗೆ ಬೇಕಿಲ್ಲ. ನಾವು ಅದಕ್ಕಿಂತಲೂ ಉನ್ನತವಾದುದನ್ನು ಅಪೇಕ್ಷಿಸುತ್ತೇವೆ.'

'ನಾವು ಸಮಾಜದಿಂದ ಎಷ್ಟೊಂದು ಪಡೆಯುತ್ತೇವೆ ಎಂಬುದನ್ನು ಊಹಿಸಿ. ಸರ್ಕಾರವು ಪ್ರತಿವರ್ಷ ಡಾಕ್ಟರರು ಮತ್ತು ಇಂಜಿನೀಯರರನ್ನು ತಯಾರಿಸಲು ಮಿಲಿಯಗಟ್ಟಳೆ ಹಣ ವಿನಿ ಯೋಗಿಸುತ್ತದೆ. ಸರ್ಕಾರ ನಮ್ಮ ಶಿಕ್ಷಣದ ಮೇಲೆ ಸಬ್ಸಿಡಿ ನೀಡ ದಿದ್ದರೆ ತುಂಬ ಶ್ರೀಮಂತರು ಮಾತ್ರ ಡಾಕ್ಟರ್ ಇಂಜಿನೀಯರುಗಳು ಆಗಲು ಸಾಧ್ಯ. ಪ್ರತಿ ವೈದ್ಯನ ಶಿಕ್ಷಣಕ್ಕೆ ಸರ್ಕಾರ ೩-೪ ಲಕ್ಷ ರೂ. ವಿನಿಯೋಗಿಸುತ್ತದೆ. ನಾವು ಕೊಡುವುದು ಕೇವಲ ಕೆಲವು ಸಾವಿರ ರೂ.ಗಳು ಮಾತ್ರ. ಉಳಿದ ಹಣ ಎಲ್ಲಿಂದ ಬರುತ್ತದೆ? ಕಷ್ಟಪಟ್ಟು ದುಡಿದು ತೆರಿಗೆ ನೀಡುವವರಿಂದ. ನಾವು ಸಮಾಜದಿಂದ ಇಷ್ಟೊಂದು ಸ್ವೀಕರಿಸುತ್ತಿರುವಾಗ ಅದಕ್ಕೆ ನಾವು ಏನನ್ನೂ ಹಿಂತಿರುಗಿಸುವುದು ಬೇಡವೆ?'

ಈ ಅದ್ಭುತ ಕಥೆಯನ್ನು ನಾವು ಮೈಯೆಲ್ಲ ಕಿವಿಯಾಗಿ ಕೇಳಿದೆವು. ಸಮಯ ಕಳೆದದ್ದೇ ತಿಳಿಯಲಿಲ್ಲ. ಅವರು ಮಾತು ನಿಲ್ಲಿಸಿದಾಗಲೇ ಕತ್ತಲೆಯಾಗುತ್ತಿದ್ದುದು ನಮ್ಮ ಗಮನಕ್ಕೆ ಬಂದುದು. ನಾವು ಬಾಲು ಮತ್ತು ಅವರ ಬಳಗದವರಿಗೆ ಧನ್ಯವಾದವನ್ನು ಅರ್ಪಿಸಿ ಅವರಿಂದ ಬೀಳ್ಕೊಂಡೆವು. ಇನ್ನೂ ವಾಸ್ತವ ಪ್ರಪಂಚಕ್ಕೆ ನಮ್ಮ ಮನಸ್ಸು ಸಂಪೂರ್ಣ ಬಂದಿರಲಿಲ್ಲ. ಯಾವುದೊ ಮಾತಿಗೆ ನಿಲುಕದ ಆನಂದ, ಸ್ಫೂರ್ತಿಯ ಅಲೆಯ ಮೇಲೆ ನಾವು ತೇಲುತ್ತಿರುವಂತೆ ಭಾಸ ವಾಗುತ್ತಿತ್ತು.

ಏನಾಶ್ಚರ್ಯ! ಕೇವಲ ರ್‍ಯಾಗಿಂಗ್ ಒಬ್ಬ ವ್ಯಕ್ತಿಯ ಜೀವನ ಕ್ರಮವನ್ನೇ ಬದಲಾಯಿಸಿಬಿಟ್ಟಿತು. ಈ ಪ್ರಪಂಚದಲ್ಲಿ ನಾವು ಯಾವುದನ್ನು ಒಳಿತು ಅಥವಾ ಕೆಡುಕು ಎಂದು ಕರೆಯುವುದು? ವ್ಯಕ್ತಿಯು ಜೀವನದ ಘಟನೆಗಳನ್ನು ಹೇಗೆ ಸ್ವೀಕರಿಸುತ್ತಾನೆ ಎಂಬುದನ್ನು ಅದು ಅವಲಂಬಿಸುತ್ತದೆಯಲ್ಲವೆ? ಹಾಗಾದಲೆ ರ್‍ಯಾಗಿಂಗ್ ಒಳ್ಳೆಯದೆನ್ನೋಣವೆ? ಇಲ್ಲ, ಹಾಗೂ ಹೇಳು ವಂತಿಲ್ಲ.

**ಕೆಲವರು ಏನಾದರೂ ಮಹತ್ತರವಾದುದನ್ನು ಸಾಧಿಸುವುದ ಕ್ಕಾಗಿಯೇ ಹುಟ್ಟಿರುತ್ತಾರೆ. ಅವರ ಪಾಲಿಗೆ ಸಾಮಾನ್ಯರ ದೃಷ್ಟಿಯ ಕೆಡುಕೂ ಒಳಿತಾಗಿ ಪರಿವರ್ತಿಸುತ್ತದೆ. ಅವರು ಸಾಮಾನ್ಯರ ಹಾದಿ ಯನ್ನು ಆರಿಸಿಕೊಳ್ಳುವುದಿಲ್ಲ—ಅವರ ದಾರಿಯೇ ಬೇರೆ. ಅವರ ಆದರ್ಶ ಇನ್ನೂ ಅನೇಕರಿಗೆ ದಾರಿಯಾಗುತ್ತದೆ. ಅವರು ಆಗಲೇ ಇರುವ ದಾರಿಯಲ್ಲಿ ನಡೆಯದೆ ಹೊಸ ದಾರಿಯನ್ನು ನಿರ್ಮಿಸುತ್ತಾರೆ. ಇಂಥವರ ಜೀವನ ಮತ್ತು ಕಾರ್ಯಸಾಧನೆ ಹಲವಾರು ಯುವಕರಿಗೆ ಸ್ಫೂರ್ತಿಯನ್ನೀಯಲೆಂದು ಹಾರೈಸುತ್ತೇವೆ.** ❄